## "ವ್ಯಕ್ತಿತ್ವ ವಿಕಸನ ಶಿಬಿರ"



ತಾ.25-12-2007ರಂದು ಸಂಘದ ಶಿಕ್ಷಣ ಮತ್ತು ತರಬೇತಿ ವೇದಿಕೆಯ ಆಶ್ರಯದಲ್ಲಿ ಒಂದೆ ದಿನದ ವ್ಯಕ್ತಿತ್ವ ವಿಕಸನ ಶಿಬಿರವು ಯಶಸ್ವಿಯಾಗಿ ನಡೆಯಿತು. ಉಡುಪಿ ಶ್ರೀ ಪೂರ್ಣಪ್ರಜ್ಞ ಪದವಿ ಪೂರ್ವಕಾಲೇಜಿನ ಪ್ರಾಂಶುಪಾಲರಾದ ಪ್ರೊ। ಕೆ. ಎಸ್. ಪ್ರಭಾಕರರಾವ್ ಶಿಬಿರವನ್ನು ಉದ್ಘಾಟಿಸಿ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ವ್ಯಕ್ತಿತ್ವವಿಕಸನವೂ ಮಹತ್ವದ ಪಾತ್ರವನ್ನು ವಹಿಸುತ್ತದೆ, ಹಾಗೆಯೇ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗಾಗಿ ವ್ಯಕ್ತಿತ್ವ ವಿಕಸನ ಚಟುವಟಿಕೆಗಳು ನಡೆದರೂ ಎಲ್ಲರಿಗೂ ಅವಕಾಶ ಸಿಗುವುದಿಲ್ಲ. ವಿದ್ಯಾರ್ಥಿಗಳ ಸೃಜನಾತ್ಮಕ ಬೆಳವಣಿಗೆಗೆ ಹಾಗೂ ಧನಾತ್ಮಕ ಚಿಂತನೆಗೆ ಇಂತಹ ಕಾರ್ಯಕ್ರಮಗಳು ಅವಕಾಶ ಮಾಡಿಕೊಡುತ್ತವೆ. ಇದಕ್ಕಾಗಿ ಸತತ ಪ್ರಯತ್ನ ಅಗತ್ಯ ಎಂದು ತಿಳಿಸಿ ವೇದಿಕೆಯು ಹಮ್ಮಿಕೊಂಡಂತಹ ಈ ಉಪಯುಕ ಶಿಬಿರದ ಬಗ್ಗೆ ಮೆಚ್ಚುಗೆ ವ್ಯಕಪಡಿಸಿದರು. ಸಮಾರೆಂಭದ ಅಧ್ಯಕ್ಷ ಸ್ಥಾನವನ್ನು ವಹಿಸಿದ್ದ ಸಂಘದ ಉಪಾಧ್ಯಕ್ಷರಾದ ಶ್ರೀ ಎಸ್.ಎಮ್.ರಾಯರು ಶಿಬಿರದ ಪ್ರಯೋಜನವನ್ನು ಪಡೆದುಕೊಳ್ಳಲು ಶಿಬಿರಾರ್ಥಿಗಳಿಗೆ ಕರೆನೀಡಿದರು. ವೇದಿಕೆಯ ಅಧ್ಯಕ್ಷರಾದ ಡಾ। ವೈ. ರವೀಂದ್ರನಾಥ್‌ರಾವ್ ಪ್ರಾಸ್ತಾವಿಕವಾಗಿ ಮಾತನಾಡಿ ಶಿಬಿರದ ಉದ್ದೇಶಗಳನ್ನು ತಿಳಿಸಿ ಎಲ್ಲರಿಗೂ ಸ್ವಾಗತಿಸಿದರು. ಕು। ಗೌತಮಿ ಪ್ರಾರ್ಥಿಸಿ, ಶ್ರೀ ಕೃಷ್ಣಕುಮಾರ್ ರಾವ್ ಮಟ್ಟು ವಂದಿಸಿದರು. ಶ್ರೀ ಪ್ರಕಾಶ್ ಹೆಬ್ಬಾರ್ ಕಾರ್ಯಕ್ರಮವನ್ನು ನಿರೂಪಿಸಿದರು.

ಪೂರ್ವಾಹ್ನದ ಗೋಷ್ಠಿಯಲ್ಲಿ ಉಪನ್ಯಾಸಕರಾದ ವೈ. ಸುದರ್ಶನ್‌ರಾವ್ ಅದಮಾರು "ಪರಿಣಾಮಕಾರಿ ಸಂವಹನ"ದ ಕುರಿತು ಉಪನ್ಯಾಸ ನೀಡಿದರು. ಸಂವಹನದ ವಿವಿಧ ಆಯಾಮಗಳು, ಅದರ ಮಹತ್ವ, ಅದನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಬಗೆಗಳನ್ನು ಮನದಟ್ಟಾಗಿ ತಿಳಿಸಿದರು. ಉಪನ್ಯಾಸಕರಾದ ಡಾ। ವೈ. ರವೀಂದ್ರನಾಥರಾವ್ ವ್ಯಕ್ತಿತ್ವ ವಿಕಸನದಲ್ಲಿ ಭಾಷಣ ಕಲೆಯ ಪಾತ್ರವನ್ನು ತಿಳಿಸಿ ಸಭಾಕಂಪನದ ಕಾರಣಗಳು ಹಾಗೂ ಲಕ್ಷಣಗಳು, ಭಾಷಣಗಾರರ ಬಗೆಗಳು, ಭಾಷಣದ ಪ್ರಮುಖ ಭಾಗಗಳು ಮತ್ತು ಅದಕ್ಕಾಗಿ ನಡೆಸುವ ಸಿದ್ಧತೆಗಳ ಬಗ್ಗೆ ಸ್ಥೂಲವಾಗಿ ವಿವರಿಸಿದರು. ಅಪರಾಹ್ನದ ಗೋಷ್ಠಿಯಲ್ಲಿ ಸಂದರ್ಶನ ಎದುರಿಸುವ ಕಲೆಯ ಕುರಿತು ಮಣಿಪಾಲದ ಸಿಂಡಿಕೇಟ್ ಇನ್‌ಸ್ಟಿಟ್ಯೂಟ್ ಆಫ್ ಬ್ಯಾಂಕ್ ಮೆನೇಜ್‌ಮೆಂಟ್‌ನ ಹಿರಿಯ ಪ್ರಬಂಧಕರಾದ ಶ್ರೀ ಐ. ಪಿ. ಸುಧೀರ್‌ಕುಮಾರ್ ಪ್ರಾತ್ಯಕ್ಷಿಕೆ ಸಹಿತವಾಗಿ ವಿವರವಾದ ಮಾಹಿತಿಯನ್ನು ನೀಡಿದರು. ಸಂದರ್ಶನದ ಉದ್ದೇಶ, ಸಿದ್ಧತೆಯ ಕುರಿತು ವಿವರಿಸಿ ಅಣಕು ಸಂದರ್ಶನದ ಮೂಲಕ ತರಬೇತಿಯನ್ನು ಪರಿಣಾಮಕಾರಿಯಾಗಿ ನಡೆಸಿಕೊಟ್ಟರು. ನಂತರ ಶಿಕ್ಷಕರಾದ ಶ್ರೀ ಬಾರ್ಕೂರು ನಾಗೇಶ್‌ರಾವ್ ಪರಿಣಾಮಕಾರಿ ನಾಯಕತ್ವದ ಬಗ್ಗೆ ಉಪನ್ಯಾಸ ನೀಡಿದರು. ನಾಯಕನ ಲಕ್ಷಣಗಳು, ಉತ್ತಮ ನಾಯಕತ್ವ ರೂಪಿಸಿಕೊಳ್ಳುವ ಕುರಿತು ವಿವರವಾದ ಮಾಹಿತಿಯನ್ನು ನೀಡಿದರು. ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ಉಪಾಧ್ಯಕ್ಷರಾದ ಶ್ರೀ ಎಸ್.ಎಮ್.ರಾವ್ ವಹಿಸಿ ಸಂಪನ್ಮೂಲ ವ್ಯಕಿಗಳಿಗೆ ಸ್ಮರಣಿಕೆಗಳನ್ನು ನೀಡಿ ಗೌರವಿಸಿದರು. ಸಂಘದ ಕೋಶಾಧಿಕಾರಿ ಶ್ರೀ ಎಮ್. ಸದಾನಂದರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಂಪನ್ಮೂಲ ವ್ಯಕ್ತಿಗಳ ಪರವಾಗಿ ಡಾ। ವೈ.ರವೀಂದ್ರನಾಥ ರಾವ್ ಹಾಗೂ ಶಿಬಿರಾರ್ಥಿಗಳ ಪರವಾಗಿ ಶ್ರೀ ಆದಿತ್ಯ, ಕು। ಅನುಪಮ ಬಂಡಿ, ಕು। ಅಪೂರ್ವ ತಮ್ಮ ಅನಿಸಿಕೆಗಳನ್ನು ತಿಳಿಸಿದರು. ಸಂಘದ ಜತೆಕಾರ್ಯದರ್ಶಿ ಶ್ರೀ ವೇಣುಗೋಪಾಲ್ ರಾವ್ ಕಾರ್ಯಕ್ರಮ ನಿರೂಪಿಸಿದರು. ಕೃಷ್ಣಕುಮಾರ್‌ರಾವ್ ವಂದಿಸಿದರು. ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಈ ಶಿಬಿರದಲ್ಲಿ ಭಾಗವಹಿಸಿದ್ದು ಸಮಾಜ ಬಾಂಧವರೂ ಪಾಲ್ಗೊಂಡಿದ್ದು ವ್ಯಕ್ತಿತ್ವ ವಿಕಸನ ಶಿಬಿರ ಯಶಸ್ವಿಯಾಗಿ ಸಂಪನ್ನಗೊಂಡಿತು. ಶ್ರೀ ಪ್ರಭಾಕರ ಭಂಡಿ ಶಿಬಿರದ ಸಂಯೋಜನೆಯಲ್ಲಿ ಸಹಕರಿಸಿದ್ದರು.

### ಪರಿಣಾಮಕಾರಿ ಸಂವಹನದ ಅವಶ್ಯಕತೆಗಳು-ಶ್ರೀ ವೈ. ಸುದರ್ಶನ್ ರಾವ್

★ ಸಂವಹನ ಮಾಡುವವನು ಯಾವಾಗಲೂ ನಗುಮುಖದಿಂದ ಇರಬೇಕು
★ ತಾನು ತನ್ನ ಬಗ್ಗೆ ಹೇಳಿಕೊಳ್ಳಬಾರದು. ತನಗಿಂತ ಶ್ರೇಷ್ಠರಾದವರ ಬಗ್ಗೆ ಮಾಹಿತಿ ನೀಡುವುದು.
★ ಇನ್ನೊಬ್ಬರ ಮಾತನ್ನು ಆಲಿಸುವ ಸ್ಥಿತಿಯಲ್ಲಿರಬೇಕು.
★ ವಾದಕ್ಕೆ ಅವಕಾಶ ಮಾಡಿಕೊಡಬಾರದು.
★ ಮಾತನಾಡುವ ವಿಷಯದ ಬಗ್ಗೆ ಸ್ಪಷ್ಟತೆ ಇರಬೇಕು.
★ ಬೇರೆಯವರನ್ನು ಟೀಕೆ ಮಾಡಲೇ ಬಾರದು. ಟೀಕೆ ಮಾಡುವವ ಬೇರೆಯವರಿಂದ ಟೀಕೆಗೆ ಒಳಗಾಗುತ್ತಾನೆ.
★ ಪರಿಸ್ಥಿತಿಯನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಊಹಿಸುವುದಲ್ಲ.
★ ತಪ್ಪು ಆದಲ್ಲಿ ತಪ್ಪನ್ನು ಒಪ್ಪಿಕೊಳ್ಳಬೇಕು.
★ ಗೊತ್ತಿಲ್ಲದ್ದನ್ನು ತಿಳಿದಿಲ್ಲ ಎಂದು ಹೇಳಿದರೆ ಒಳ್ಳೆಯದು.

## ಮಂಟಪಕ್ಕೆ ಕೊಡುಗೆ : ಶ್ರೀ ಸುಬ್ರಹ್ಮಣ್ಯ ವಿಗ್ರಹ

ಉಡುಪಿಯ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘಕ್ಕೆ ಶ್ರೀ ಬಿ. ಬಾಲಚಂದ್ರರಾವ್, ಮುಂಬಯಿ ಮತ್ತು ಅವರ ಮಿತ್ರರು ರೂ.15,000/- ಬೆಲೆ ಬಾಳುವ ಸುಂದರವಾದ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವರ ಮೂರ್ತಿಯನ್ನು ಕೊಡುಗೆಯಾಗಿ ನೀಡಿದ್ದಾರೆ. ಡಿ.15 ಶ್ರೀ ಸುಬ್ರಹ್ಮಣ್ಯ ಷಷ್ಠಿ ದಿನದಂದು ಪುರೋಹಿತ ಶ್ರೀ ರಾಮಮೂರ್ತಿಯವರು ಶ್ರೀ ದೇವರ ವಿಗ್ರಹಕ್ಕೆ ಪೂಜೆ ಮಾಡಿದ ನಂತರ ವಿಗ್ರಹವನ್ನು ಶ್ರೀ ಬಿ. ಬಾಲಚಂದ್ರರಾವ್ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾವ್ ಅವರಿಗೆ ಹಸ್ತಾಂತರಿಸಿದರು. ಈ ಶುಭ ಸಂದರ್ಭದಲ್ಲಿ ಸಂಘದ ಕಾರ್ಯದರ್ಶಿ ಯು. ಪ್ರಫುಲ್ಲಚಂದ್ರರಾವ್, ಕೋಶಾಧಿಕಾರಿ ಶ್ರೀ ಎಮ್.ಸದಾನಂದರಾವ್, ಶ್ರೀ ಎಮ್.ಪಾಲಚಂದ್ರರಾವ್, ಡಾ। ಪಿ.ಜಿ.ರಾವ್, ಶ್ರೀ ಬೆಳ್ಮಣ್ಣು ವಾಸುದೇವರಾವ್ ಮತ್ತು ಅನೇಕ ಗಣ್ಯರು ಪಾಲ್ಗೊಂಡಿದ್ದರು. ಶ್ರೀ ಬಿ. ಬಾಲಚಂದ್ರರಾವ್ ಮತ್ತು ಅವರ ಮಿತ್ರರ ಈ ವಿಶೇಷ ಕೊಡುಗೆಗಾಗಿ ಉಡುಪಿ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಆಡಳಿತ ಮಂಡಳಿ ಕೃತಜ್ಞತೆಯನ್ನು ಸಲ್ಲಿಸುತ್ತದೆ.

## "ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಯ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್" ಉದ್ಘಾಟನೆ



ಎಲ್ಲೂರು ಜೋಯಿಸರೆಂದೇ ಪ್ರಸಿದ್ಧಿಯಾಗಿದ್ದ ದಿ। ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್, ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್‌ನ ಉದ್ಘಾಟನೆಯನ್ನು ತಾ. 30-12-2007 ರಂದು ಎಲ್ಲೂರಿನ ಮನೆಯಲ್ಲಿ ಅದಮಾರಿನ ನಿವೃತ್ತ ಅಧ್ಯಾಪಕ, ಶ್ರೀ ಎಲ್ಲೂರು ಕಾಶಿ ಸಂತಾನ ಟ್ರಸ್ಟ್‌ನ ಸಂಚಾಲಕರಾದ ಶ್ರೀ ವೈ. ಎಂ. ಶ್ರೀಧರರಾಯರು ದೀಪ ಬೆಳಗಿಸಿ ನೆರವೇರಿಸಿದರು. ಅದೇ ಸಮಾರಂಭದಲ್ಲಿ 1950ನೇ ಇಸವಿಯಲ್ಲಿ ಎಲ್ಲೂರು ಜೋಯಿಸರಿಂದ ರಚಿಸಲ್ಪಟ್ಟಿದ್ದ " ಗ್ರಾಮ ವೈದ್ಯ" ಎಂಬ ಆಯುರ್ವೇದ ಗ್ರಂಥವನ್ನು ಎಲ್ಲೂರಿನ ನಿವೃತ್ತ ಅಧ್ಯಾಪಕ ಶ್ರೀ ವೈ. ವಿ. ಸುಬ್ಬರಾಯರು ಬಿಡುಗಡೆಗೊಳಿಸಿದರು. ಕುಮಾರಿ ಮಾನಸಳ ಪ್ರರ್ಥನೆಯೊಂದಿಗೆ ಆರಂಭಗೊಂಡ ಸಮಾರಂಭಕ್ಕೆ ಟ್ರಸ್ಟ್‌ನ ವಿಶ್ವಸ್ತ, ಉಡುಪಿ ಇಂದ್ರಾಳಿ ಇಂಗ್ಲೀಷ್ ಮೀಡಿಯಂ ಹೈಸ್ಕೂಲ್‌ನ ಪ್ರಾಮಶುಪಾಲ ಶ್ರೀ ವೈ. ಭುವನೇಂದ್ರ ರಾವ್‌ರವರು ಸ್ವಾಗತಿಸಿದರು. ಉಡುಪಿಯ ಖ್ಯಾತ ವೈದ್ಯ ಹಾಗೂ ಟ್ರಸ್ಟ್‌ನ ರೂವಾರಿ ಡಾ। ವೈ. ಸುದರ್ಶನ ರಾವ್ ಟ್ರಸ್ಟ್‌ನ ಧ್ಯೇಯೋದ್ದೇಶಗಳನ್ನೂ ಹಾಗೂ ಟ್ರಸ್ಟಿಗಳಾದ ಶ್ರೀ ವೈ. ಉಮೇಶ ರಾವ್, ಡಾ। ವೈ ಚಂದ್ರಶೇಖರ ರಾವ್, ಶ್ರೀ ವೈ ಶಾಂತಿನಾಥ ರಾವ್, ಶ್ರೀ ವೈ.ಸರ್ವಜ್ಞಮೂರ್ತಿ, ಶ್ರೀ ವೈ. ಭುವನೇಂದ್ರ ರಾವ್, ಶ್ರೀಮತಿ ಇಂದಿರಾ ಮತ್ತು ಶ್ರೀಮತಿ ವಿದ್ಯಾರವರನ್ನೂ ಹಾಗೂ ಟ್ರಸ್ಟ್‌ನ ಸಲಹೆಗಾರರಾದ ಶ್ರೀ ವೈ. ಶಂಕರ ರಾವ್, ಶ್ರೀ ವೈ. ಜಗದೀಶ ರಾವ್, ಡಾ। ವೈ. ರವೀಂದ್ರನಾಥ ರಾವ್‌ರವರನ್ನೂ ಸಭೆಗೆ ಪರಿಚಯಿಸಿದರು.

ಉದ್ಘಾಟನಾ ಭಾಷಣದಲ್ಲಿ ಶ್ರೀ ವೈ.ಎಂ. ಶ್ರೀಧರರಾಯರು ದಿ। ಎಲ್ಲೂರು ಲಕ್ಷ್ಮೀನಾರಾಯಣ ರಾಯರು ಕನ್ನಡ ಪಂಡಿತರಾಗಿ, ಆಯುರ್ವೇದ ತಜ್ಞರಾಗಿ, ಜ್ಯೋತಿಷಿಗಳಾಗಿ, ಪಂಚಾಂಗಕರ್ತರಾಗಿ ಸಾಹಿತಿಯಾಗಿ, ವೇದಶಾಸ್ತ್ರ ಪಾರಂಗತರಾಗಿ ಅವರ ಬಹುಮುಖ ಪ್ರತಿಭೆಯನ್ನು ನೆನಪಿಸಿಕೊಂಡರು. ಶ್ರೀ ವೈ. ವಿ. ಸುಬ್ಬರಾಯರು ದೇಶವು ದಟ್ಟ ದಾರಿದ್ರ್ಯದಲ್ಲಿ ತೊಳಲಾಡುತ್ತಿದ್ದಾಗ, ಸಂಪರ್ಕ ವ್ಯವಸ್ಥೆ ಇಲ್ಲದಿದ್ದ ದಿನಗಳಲ್ಲಿ ಎಲ್ಲೂರು ಜೋಯಿಸರು ಬೆಳೆಸಿದ ಮೂಲಿಕೋದ್ಯಾನ, ಆಯುರ್ವೇದ, ಸಾಹಿತ್ಯ ಕ್ಷೇತ್ರದಲ್ಲಿ ಅವರ ಸಾಧನೆಗಳನ್ನು ಸಭಿಕರಿಗೆ ವಿವರಿಸಿದರು. ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ವೈದ್ಯಾಧಿಕಾರಿ ಡಾ। ವೈ. ಚಂದ್ರಶೇಖರ ರಾಯರು ಆಯುರ್ವೇದ ಚಿಕಿತ್ಸೆಯ ವೈಶಿಷ್ಟ್ಯವನ್ನೂ, ಚಿಕಿತ್ಸೆ ಫಲಕಾರಿಯಾಗಬೇಕಾದರೆ ಅನುಸರಿಸಬೇಕಾದ ಕಠಿಣ ಕ್ರಮಗಳನ್ನು ವಿವರಿಸಿದರು. ಟ್ರಸ್ಟ್‌ನ ಮುಂದಿನ ಕೆಲಸಗಳಿಗೆ ಎಲ್ಲರ ಸಹಕಾರ ಕೋರಿದರು. ಶ್ರೀ ವೈ. ಲಕ್ಷ್ಮೀಶ ರಾವ್ ಧನ್ಯವಾದ ಸಮರ್ಪಿಸಿ ದರು ಹಾಗೂ ಬ್ರಹ್ಮಾವರದ ಎಸ್.ಎಂ.ಎಸ್. ಕಾಲೇಜಿನ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ವೈ. ರವೀಂದ್ರನಾಥರವರು ಕಾರ್ಯಕ್ರಮ ನಿರ್ವಹಿಸಿದರು.

## ಅಪರೂಪದ ಯಾಗ "ಸೌತ್ರಾಮಣಿ ಗವಾಮಯನಯಾಗ"



ಶ್ರೀ ಕ್ಷೇತ್ರ ಪಾವಂಜೆಯಲ್ಲಿ ಪಾವಂಜೆ ಪಂಡಿತ್ ಸುಬ್ರಾಯಭಟ್ ಸ್ಮಾರಕ 'ಶಾರಧ್ವತ' ಯಜ್ಞಾಂಗಣದಲ್ಲಿ ಡಿಸೆಂಬರ್ 9ರಿಂದ ಆರಂಭಗೊಂಡು ಡಿಸೆಂಬರ್ 16ರ ವರೆಗೆ 120 ಗಂಟೆ ಕಾಲ ಅಹೋರಾತ್ರಿ ನಡೆದಿದ್ದ ಅಪರೂಪದ ಯಾಗ ಸೌತ್ರಾಮಣಿ ಗವಾಮಯನ ಯಾಗ ಅಪೂರ್ವವಾಗಿಯೇ ಸಂಪನ್ನಗೊಂಡಿತು. ವರ್ಗ ವೈಷಮ್ಯವಿಲ್ಲದೇ ಸರ್ವವರ್ಗದವರೂ ಸಮಾನತೆಯಿಂದ ಐಕ್ಯದಿಂದ ಬದುಕುವ ಆಶಯವುಳ್ಳ ಯಾಗವೊಂದರ ಸಾಕ್ಷಿ ಈ ಯಾಗ.

ಬಹುಶಃ ಸಹಸ್ರಮಾನದಲ್ಲಿ ನಡೆದ ಮೊದಲ ಯಾಗದ ಯೋಗವಿದು. ಹಿಂದೆ ವಶಿಷ್ಠರು ವಿಶ್ವಾಮಿತ್ರರಿಂದ ಮಾಡಿಸಿದ್ದರಂತೆ. ಗೋಬಿಲ ಮಹರ್ಷಿಗಳು ಹಲವು ಸಲ ನೆರವೇರಿಸಿದ್ದರೆಂಬ ಮಾತೂ ಇದೆ. ಇತಿಹಾಸ ಕಾಲಘಟ್ಟಕ್ಕೆ ಬಂದರೆ ಬನವಾಸಿಯ ಕದಂಬರು ಮಾಡಿಸಿದ್ದರೆಂಬ ಹೇಳಿಕೆ ಇದೆ. ಈಗ ಈ ಮಹಾಯಾಗ ಪಾವಂಜೆಯ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯಸ್ವಾಮಿ ಸಾನ್ನಿಧ್ಯದಲ್ಲಿ ಅಸಂಖ್ಯ ಭಕ್ತಾದಿಗಳ ಸಹಭಾಗಿತ್ವದಿಂದ ಅನ್ನಸಂತರ್ಪಣೆ ಮತ್ತು ಸಾಂಸ್ಕೃತಿಕ ಸಮಾರಂಭಗಳೊಂದಿಗೆ ಸಂಭ್ರಮದಿಂದ ನೆರವೇರಿದ್ದು ಈಗ ಇತಿಹಾಸ.

ಲೋಕಕಲ್ಯಾಣಾರ್ಥವಾಗಿ ನಡೆಯುವ ಈ ಯಾಗದ ಫಲ ಕನ್ನಡ ನಾಡಿಗೆ ಮಾತ್ರವಲ್ಲ ಇಡೀ ರಾಷ್ಟ್ರಕ್ಕೆ ಅರ್ಪಣೆಯಾಗಿ ದೇಶದಲ್ಲಿ ಸಮೃದ್ಧಿಯ ವಾತಾವರಣ ನಿರ್ಮಾಣಗೊಂಡು ಸಹೋದರತ್ವ ನೆಲೆಯಾಗುವಂತಾಗಲಿ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪಾವಂಜೆಯಲ್ಲಿ ನಡೆದ ಯಾಗದ ಪೂರ್ಣಾಹುತಿಯಲ್ಲಿ ಭಾಗವಹಿಸಿದ ಬಳಿಕ ನುಡಿದರು.